ಆದರೆ ಒಂದು ವಿಷಯ. ಅಷ್ಟೆಲ್ಲಾ ಕುಂದುಕೊರತೆಗಳಿದ್ದರೂ, ನನಗೆ ಒಂದು ದಿನವೂ ಕೂಡ 'ಕಷ್ಟ' ಎಂಬ ಭಾವನೆ ಬರಲೇ ಇಲ್ಲ. ಏಕೆಂದರೆ ನಾನು ಉತ್ತರಕಾಶಿಯಲ್ಲಿ ತಪಸ್ಸು ಮಾಡುತ್ತಿದ್ದ ದಿನಗಳಿಗೆ ಹೋಲಿಸಿ ನೋಡಿದರೆ ಇಲ್ಲಿ ಹೆಚ್ಚು ಸೌಲಭ್ಯಗಳಿದ್ದವು. ಉತ್ತರಕಾಶಿಯ ಜೀವನ ಆದರ್ಶ ಜೀವನ. ಅದನ್ನು ಅಳತೆ ಗೋಲಾಗಿ ಉಪಯೋಗಿಸುತ್ತಿದ್ದೆ. If we prepare ourselves for the worst, we are happy everywhere and every time. (ಕಠಿಣವಾದ ಪರಿಸ್ಥಿತಿಯನ್ನು ಎದುರಿಸಲು ನಾವು ತಯಾರಿದ್ದಲ್ಲಿ, ಎಂದೆಂದಿಗೂ ಆನಂದದಿಂದ ಇರಲು ನಮಗೆ ಸಾಧ್ಯ). ಈ ಸೂತ್ರವನ್ನು ಜೀವನದಲ್ಲಿ ಪಾಲಿಸಿದರೆ ಎಂದೆಂದಿಗೂ ಸುಖವಾಗಿರಬಹುದು.

**ಪ್ರಶ್ನೆ:** ಸ್ವಾಮೀಜಿ, ಚಿರಾಪುಂಜಿಯಿಂದ ಶೆಲ್ಲಾ ಕೇಂದ್ರಕ್ಕೆ (ಚಿರಾಪುಂಜಿ ಕೇಂದ್ರದ ಶಾಖೆ) ಹೇಗೆ ಸಂಚರಿಸುತ್ತಿದ್ದಿರಿ?

**ಸ್ವಾಮೀಜಿ:** ರಾಮಮಯ್ ಮಹಾರಾಜ್ (ಸಹಸಂನ್ಯಾಸಿ) ಜೊತೆಗೆ ಕಾಡಿನ ಕಾಲುದಾರಿಯಲ್ಲಿಯೇ ನಡೆದು ಹೋಗುತ್ತಿದ್ದೆ. ತುಂಬಾ ಜಾರುವ ಪ್ರದೇಶವಾದ್ದರಿಂದ ಬಹಳಷ್ಟು ಬಾರಿ ಜಾರಿ ಬೀಳುತ್ತಿದ್ದೆವು. ಹಾಗೆ ನೂರು ಬಾರಿ ಜಾರಿದೆನೆಂದು ರಾಮಮಯ್ ಮಹಾರಾಜರು ಒಮ್ಮೆ ನನಗೆ ತಿಳಿಸಿದರು.

ಚಿರಾಪುಂಜಿಯಿಂದ ಶೆಲ್ಲಾ ಸುಮಾರು ೫೦ ಕಿ.ಮೀ. ದೂರ ಇತ್ತು. ಕಾಲುದಾರಿಯಲ್ಲಿ ನಡೆದುಹೋದರೆ ಆ ಅಂತರ ಕಡಿಮೆಯಾಗುತ್ತಿತ್ತು.

**ಪ್ರಶ್ನೆ:** ಸ್ವಾಮೀಜಿ, ನೀವೆಷ್ಟು ದಿನಗಳ ಕಾಲ ಚಿರಾಪುಂಜಿಯಲ್ಲಿದ್ದಿರಿ?

**ಸ್ವಾಮೀಜಿ:** ಒಂಬತ್ತು ವರುಷ ಇದ್ದೆ. ಯಾವಾಗ ಶಾಲೆಯ ಪರಿಸ್ಥಿತಿ ಒಂದು ಹಂತಕ್ಕೆ ಬಂದಿತೋ, ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಮಾಧವಾನಂದರಿಗೆ, 'ವರ್ಗಾವಣೆ ಬೇಕು' ಎಂದು ವಿನಂತಿಸಿಕೊಂಡೆ.

"ನಿನ್ನ ವಿಷಯ ನಮ್ಮ ಮನಸ್ಸಿನಲ್ಲಿದೆ" ಎಂದು ಅವರು ಉತ್ತರ ಬರೆದರು. (ನಗುತ್ತಾ) ಮನಸ್ಸಿನಲ್ಲಿತ್ತು, ಸರಿಯೇ. ಆಗ ರಾಜ್‌ಕೋಟ್ ಆಶ್ರಮದ ಪರಿಸ್ಥಿತಿ ತುಂಬ ಬಿಕ್ಕಟ್ಟಿನಲ್ಲಿತ್ತು. ಮುಂದುವರಿಸಿಕೊಂಡು ಹೋಗಲಾರದ ಸ್ಥಿತಿಯಲ್ಲಿತ್ತು. ಸುಮಾರು ೭೫,೦೦೦ ರೂಪಾಯಿಗಳ ಸಾಲ ಇದೆ ಎಂದು ಕೇಳಿದ್ದೆ. ಆ ಸ್ಥಳಕ್ಕೆ ಅಧ್ಯಕ್ಷರನ್ನು ಹುಡುಕುತ್ತಿದ್ದರು. ನನ್ನನ್ನು ಅಲ್ಲಿಗೆ ಕಳುಹಿಸಿದರು.

**ಪ್ರಶ್ನೆ :** ಸ್ವಾಮೀಜಿ, ನಿಮ್ಮನ್ನು ಅಲ್ಲಿಗೆ ಹೋಗಲು ಹೇಳಿದಾಗ ನಿಮ್ಮ ಪ್ರತಿಕ್ರಿಯೆ ಹೇಗಿತ್ತು?

**ಸ್ವಾಮೀಜಿ :** ನಾನು ಅಷ್ಟೇನೂ ಸಾಹಸಿ ಅಲ್ಲ; ಆದರೆ ಮನಸ್ಸಿನಲ್ಲೇ ಭಾವಿಸಿದೆ, ಯಾರಾದರೊಬ್ಬರು ಅಲ್ಲಿಗೆ ಹೋಗಲೇಬೇಕು. ಆ ಯಾರೋ ಒಬ್ಬರು ನಾನೇ ಏಕೆ ಆಗಬಾರದು? ಎಂದು. ಆಶ್ರಮದ ಸಾಲ ಕ್ರಮೇಣ ತೀರಿತು.

೧೯೪೫ರಲ್ಲಿ ಬ್ರಿಟಿಷ್ ಸರ್ಕಾರದ ಆಡಳಿತವಿತ್ತು. ಆಗಷ್ಟೇ ಎರಡನೆಯ ಮಹಾಯುದ್ಧವೂ ಕೊನೆಗೊಂಡಿತ್ತು. ರಾಮಕೃಷ್ಣ ಮಹಾಸಂಘದ ಪರಿಚಯವೂ ಬಹಳ ಜನರಿಗಿರಲಿಲ್ಲ. ಅಲ್ಲದೆ ಇಂದಿನಂತೆ ಭಾರತ ಅಭಿವೃದ್ಧಿಶೀಲ ರಾಷ್ಟ್ರವಾಗಿರಲಿಲ್ಲ. ಈ ಎಲ್ಲ ಅಡೆತಡೆಗಳನ್ನೂ ದಾಟಿ, ಸ್ವಾಮಿ ಭೂತೇಶಾನಂದಜಿ ಅವರು ರಾಜ್‌ಕೋಟ್ ಆಶ್ರಮದ ಆರ್ಥಿಕಸ್ಥಿತಿಯಲ್ಲಿ ಸ್ಥಿರತೆಯನ್ನು ತಂದರು. ಗುಜರಾತಿನಲ್ಲಿ ದಿವ್ಯತ್ರಯರ ಭಾವಪ್ರಚಾರವನ್ನು ಮಾಡಿ ಜನಪ್ರಿಯತೆಯನ್ನು ಗಳಿಸಿದರು. ಇದು ನಿಜಕ್ಕೂ ಶ್ಲಾಘನೀಯ.

ಸ್ವಾಮಿ ಭೂತೇಶಾನಂದಜಿ ಅವರ ಜೀವನದಲ್ಲಿ ಭಗವಂತನಲ್ಲಿ ಶರಣಾಗತಿ ಹಾಗೂ ಸ್ವಪ್ರಯತ್ನಗಳ ಒಂದು ಅಪೂರ್ವ ಸಾಮರಸ್ಯವನ್ನು ಕಾಣಬಹುದು. ಒಮ್ಮೆ ಸ್ವಾಮಿ ಪ್ರಮಾನಂದಜಿ ಎಂಬ ಸ್ವಾಮಿಗಳು ರಾಜ್‌ಕೋಟ್ ಆಶ್ರಮಕ್ಕೆ ಹೋದಾಗ, ರಾತ್ರಿಯ ಊಟಕ್ಕೆ ಇದ್ದದ್ದು ಸ್ವಲ್ಪ ಹಾಲು ಮಾತ್ರ. ಅವರು ಹೀಗೆ ಬರೆಯುತ್ತಾರೆ: "ಸ್ವಾಮಿ ಭೂತೇಶಾನಂದರು ಅತಿಥಿಯ (ನನ್ನ) ಮುಂದೆ ಸ್ವಲ್ಪವೂ ವಿಚಲಿತರಾಗದೆ, ಸ್ವಲ್ಪವೂ ಪೇಚಾಡದೇ ಹೇಳಿದ್ದು ಇಷ್ಟು: 'ನಮಗಿಂದು ಭಗವಂತ ಇಷ್ಟು ಹಾಲನ್ನು ದಯಪಾಲಿಸಿದ್ದಾನೆ. ಇದನ್ನೇ ಕುಡಿದು ತೃಪ್ತಿಪಡೋಣ.' "

ರಾಜ್‌ಕೋಟ್‌ಗೆ ಹೋದ ಒಂದು ತಿಂಗಳಿನಲ್ಲಿಯೇ ಸ್ವಾಮಿ ಭೂತೇಶಾನಂದಜಿ ಅವರು ಗುಜರಾತಿ ಭಾಷೆಯನ್ನು ಕಲಿತುಕೊಂಡರು. ಕ್ರಮೇಣ ಗುಜರಾತಿಗಳಲ್ಲೇ ಒಬ್ಬರಾಗಿಬಿಟ್ಟರು. ಈ ಹೊಸ ಭಾಷೆಯನ್ನು ಅದೆಷ್ಟು ಚೆನ್ನಾಗಿ ಕಲಿತರೆಂದರೆ, ಭಕ್ತರು ಅವರಿಗೆ ಹೀಗೆ ಹೇಳುತ್ತಿದ್ದರು: "ಸ್ವಾಮೀಜಿ, ನೀವು ನಮಗಿಂತಲೂ ಚೆನ್ನಾಗಿ ನಮ್ಮ ಭಾಷೆಯನ್ನು ಬಲ್ಲವರಾಗಿದ್ದೀರಿ." ಸ್ವಾಮೀಜಿಯವರು ರಾಜ್‌ಕೋಟ್‌ಗೆ ಹೋದ ನಂತರ, ಗುಜರಾತಿಯಲ್ಲಿ ರಾಮಕೃಷ್ಣ–ವಿವೇಕಾನಂದ ಭಾವಧಾರೆಯ ಪುಸ್ತಕಗಳ ಪ್ರಕಟಣೆ ಸುವ್ಯವಸ್ಥಿತ ರೂಪದಲ್ಲಿ ನಡೆಯಲಾರಂಭಿಸಿತು. ಹಿಂದೆ ಪ್ರಕಟವಾದ ಪುಸ್ತಕಗಳ ಅನುವಾದದಲ್ಲಿದ್ದ ದೋಷಗಳನ್ನು ಸ್ವಾಮೀಜಿ ತಾವೇ ತಿದ್ದಿ ಪ್ರಕಟಿಸಿದರು.

ಸ್ವಾಮಿ ವಿವೇಕಾನಂದರ ಜನ್ಮಶತಮಾನೋತ್ಸವ ಸಮಾರಂಭದ ಸಮಯಕ್ಕೆ, 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯನ್ನು ಗುಜರಾತಿ ಭಾಷೆಗೆ ಅನುವಾದ ಮಾಡಿ ಪ್ರಕಟಿಸಬೇಕೆಂದು ಅಂದಿನ ಗುಜರಾತಿನ ಮಂತ್ರಿಗಳೊಬ್ಬರೂ ಸೇರಿ ಹಲವಾರು ಭಕ್ತರು ಸ್ವಾಮಿ ಭೂತೇಶಾನಂದಜಿ ಅವರಲ್ಲಿ ಮನವಿ ಸಲ್ಲಿಸಿದರು. ಆ ಬೇಡಿಕೆಗೆ ಅವರು ಸಂತೋಷದಿಂದ ಒಪ್ಪಿದರು. ಇದಕ್ಕೆ ಅವಶ್ಯವಿದ್ದ ಆರ್ಥಿಕ ನೆರವು ಕೇಂದ್ರ ಹಾಗೂ ರಾಜ್ಯಸರ್ಕಾರಗಳಿಂದ ಒದಗಿಬಂತು.

ಸ್ವಾಮಿ ಭೂತೇಶಾನಂದಜಿ ಅವರು ಇನ್ನೊಂದು ಕಷ್ಟವನ್ನು ಎದುರಿಸಬೇಕಾಯಿತು. ಅದೆಂದರೆ ಇಷ್ಟೊಂದು ಪ್ರಮಾಣದಲ್ಲಿ ಮುದ್ರಣಕೆಲಸವನ್ನು ಕೈಗೊಳ್ಳಬಹುದಾದ ಮುದ್ರಣಾಲಯದ್ದು. ಹತ್ತಿರದಲ್ಲಿದ್ದ ಯಾವ ಮುದ್ರಣಾಲಯಕ್ಕೂ ಈ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಸಾಮರ್ಥ್ಯ ಇಲ್ಲದಿದ್ದುದರಿಂದ, ಸ್ವಾಮಿ ಭೂತೇಶಾನಂದಜಿ ಅವರು ಸುಮಾರು ೨೦೦ ಕಿ.ಮೀ. ದೂರದಲ್ಲಿರುವ ಅಹಮದಾಬಾದಿನ ನವಜೀವನ ಮುದ್ರಣಾಲಯಕ್ಕೆ ಆ ಕೆಲಸವನ್ನು ಒಪ್ಪಿಸಿದರು. ಸ್ವತಃ ಆಗಿಂದಾಗ್ಗೆ ಬಸ್ಸಿನಲ್ಲಿ ಪ್ರಯಾಣ ಮಾಡಿ, ಮುದ್ರಣಾಲಯದಲ್ಲಿ ಮಧ್ಯರಾತ್ರಿಯವರೆಗೂ ಕುಳಿತು, ಕೆಲವೊಮ್ಮೆ ತಿದ್ದುಪಡಿಗಳನ್ನು ಸೂಚಿಸಿ, ಗುಜರಾತಿ ಭಾಷೆಯಲ್ಲಿ 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ' ಯನ್ನು ಪ್ರಪ್ರಥಮ ಬಾರಿಗೆ ಹೊರತಂದರು. ಕೃತಿಶ್ರೇಣಿ ಹಾಗೂ ಇತರ ಸಣ್ಣ ಸಣ್ಣ ಪುಸ್ತಕಗಳು